ಸಿಸಿ ನಂ. 170/2025
ಚಾಸಾ. 30 /ಆಸಾ 9

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಸಿಜೆಎಂ**
**ಧಾರವಾಡ**

**ಸಿಸಿ ನಂಃ 170/2025**

| | | |
|---|---|---|
| **ಸಾಕ್ಷಿಯ ಹೆಸರು** | ಃ | ಶ್ರೀನಿವಾಸ ಮೇಟಿ |
| **ತಂದೆಯ ಹೆಸರು** | ಃ | ಚಂದ್ರಪ್ಪ |
| **ವಯಸ್ಸು** | ಃ | 48 **ವರ್ಷ** |
| **ಉದ್ಯೋಗ** | ಃ | ಪಿಐ , ಧಾರವಾಡ ಟ್ರಾಫಿಕ್ ಠಾಣೆ |
| **ವಾಸಸ್ಥಳ** | ಃ | **ಧಾರವಾಡ** |

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕ ಃ** 13-01-2026

**ಮುಖ್ಯ ವಿಚಾರಣೆ ಃ ಶ್ರೀ ಹಿಸಸಅ ವಕೀಲರಿಂದ.**

ನಾನು ದಿಃ 12.02.2024 ರಿಂದ ಧಾರವಾಡ ಸಂಚಾರಿ ನಿಯಂತ್ರಣ ಪೋಲಿಸ ಠಾಣೆಯಲ್ಲಿ ಪಿಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿನಾಂಕ 20.10.2024 ರಂದು ಬೆಃ 7.15 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ಚನ್ನಬಸಪ್ಪ ಮಾಳಗಿರವರು ಠಾಣೆಗೆ ಬಂದು ಕಂಪ್ಯೂಟರ್ ಬೆರಳಚ್ಚು ಮಾಡಿದ ದೂರನ್ನು ನೀಡಿದರು . ಅದರನ್ವಯ ಠಾಣಾ ಗುನ್ನಾ ನಂಃ 153/2024 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಕಳಿಸಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-1 (ಬಿ) ಎಂದು ಗುರುತಿಸಲಾಯಿತು . ಪ್ರ ವ ವ ವನ್ನು ನಿ.ಪಿ-39 ಎಂದು , ಸಾಕ್ಷಿಯ ಸಹಿಯನ್ನು ನಿಪಿ-39 (ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-1 ರವರನ್ನು ಕರೆದುಕೊಂಡು ಹೋಗಿ ಸ್ಥಳದಲ್ಲಿ ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಅವರಿಗೆ ಮಾಹಿತಿ ನೀಡಿ ನೋಟಿಸ

ಕೊಟ್ಟು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಬೆ: 8.30 ರಿಂದ 8.53 ರವರೆಗೆ ನಿಪಿ-8 ರಂತೆ ಸ್ಥಳ ಪಂಚನಾಮೆ ಮಾಡಿ ಫೋಟೋ ತೆಗೆಸಿದೆನು . ಅದೇ ವೇಳೆಗೆ ಅಪಘಾತ ಸ್ಥಳದಲ್ಲಿ ಇದ್ದ ಆಟೋ ರಿಕ್ಷಾದ ಮುಂದಿನ ಗ್ಲಾಸಿನ ರಬ್ಬರ್ ಮತ್ತು ಲಾರಿಯ ಸ್ಟೀಲಿನ ಗುಂಡು ಸ್ಥಳದಲ್ಲಿ ಬಿದಿದ್ದು ಅವುಗಳನ್ನು ವಶಕ್ಕೆ ಪಡೆದೆನು . ಸಾಕ್ಷಿಯು ನಿಪಿ-7 ಮತ್ತು 8 ರಲ್ಲಿರುವ ಸಹಿಗಳನ್ನು ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-7 (ಸಿ) ಮತ್ತು ನಿಪಿ-8 (ಸಿ) ಎಂದು ಗುರುತಿಸಲಾಯಿತು . ಸಾಕ್ಷಿಯು ಅದೇ ವೇಳೆಗೆ ತೆಗೆದ ನಿಪಿ-2 ರಿಂದ 5 ಫೋಟೋ ನೋಡಿ ಗುರುತಿಸಿರುತ್ತಾರೆ . ಈ ಕುರಿತು ಸ್ವತ್ತು ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇಧಿಸಿದೆನು . ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆಟೋ ರಿಕ್ಷಾದ ರಬ್ಬರ್ ಮತ್ತು ಲಾರಿಯ ಸ್ಟೀಲಿನ ಗುಂಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಮತ್ತು 2 ಎಂದು ಕ್ರಮವಾಗಿ ಗುರುತಿಸಲಾಯಿತು .

ನಾನು ಅಪಘಾತ ಸ್ಥಳದಲ್ಲಿ ಸ್ಥಳ ತನಿಖೆ ಮಾಡುತ್ತಿರುವ ಸಮಯದಲ್ಲಿ ಅಪಘಾತದಲ್ಲಿ ಗಾಯಗೊಂಡಿದ್ದ ಪ್ರಣವ ಹಂಚಿನಮನಿ ಇವರು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮರಣ ಹೊಂದಿರುವುದಾಗಿ ಠಾಣಾಧಿಕಾರಿಯು ಮಾಹಿತಿ ನೀಡಿದರು . ನಂತರ ಚಾಸಾ-29 ರವರಿಗೆ ಒಂದು ಜ್ಞಾಪನಾ ಕೊಟ್ಟು ಮೃತರ ಶವ ಪಂಚನಾಮೆ ಮಾಡಿ ನಂತರ ವರದಿ ಮಾಡುವಂತೆ ತಿಳಿಸಿದೆನು . ನಂತರ ತನಿಖೆ ಮುಂದುವೆಸಿ ಜಿಲ್ಲಾ ಆಸ್ಪತ್ರೆಗೆ ಬೇಟಿ ನೀಡಿ ಮೃತ ರಮೇಶ ಹಂಚಿನಮನಿ ಇವರ ಶವ ಪಂಚನಾಮೆಯನ್ನು ಪಂಚರಾದ ಚಾಸಾ-2 ಮತ್ತು 3 ರವರಿಗೆ ನೋಟಿಸ ನೀಡಿ ನಿಪಿ-22 ರಂತೆ ಶವ ಪಂಚನಾಮೆ ಮಾಡಿ ಫೋಟೋ ತೆಗೆಯಿಸಿದೆನು . ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ-40 ಎಂದು , ಸಹಿಯನ್ನು ನಿಪಿ-40 (ಎ) ಎಂದು ಗುರುತಿಸಲಾಯಿತು .

ಸಿಸಿ ನಂ. 170/2025
ಚಾಸಾ. 30 /ಆಸಾ 9

ತನಿಖೆ ಮುಂದುವೆಸಿ ಜಿಲ್ಲಾಆಸ್ಪತ್ರೆಯ ಶವಾಗಾರದಲ್ಲಿದ್ದ ಮೃತ ಮರೆವ್ವ ನಿಂಗಪ್ಪ ಹಂಚಿನಮನಿ ಇವರ ಶವ ಪಂಚನಾಮೆಯನ್ನು ಪಂಚರಾದ ಚಾಸಾ-2 ರಿಂದ 4 ರವರ ಸಮಕ್ಷಮ ನೋಟಿಸ ನೀಡಿ ನಿಪಿ-23 ರಂತೆ ಶವ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು . ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ-41 ಎಂದು , ಸಹಿಯನ್ನು ನಿಪಿ-41 (ಎ) ಎಂದು ಗುರುತಿಸಲಾಯಿತು . ಸಾಕ್ಷಿಯು ನಿಪಿ-23 ನ್ನು ನೋಡಿ ಗುರುತಿಸಿರುತ್ತಾರೆ .

ನಂತರ ಚಾಸಾ-18 ರವರಿಗೆ ನೋಟಿಸ ನೀಡಿ ಅಪಘಾತಕ್ಕೆ ಒಳಗಾದ ಮತ್ತು ಕಾರಣವಾದ ವಾಹನಗಳನ್ನು ಹಾಜರುಪಡಿಸುವಂತೆ ಜ್ಞಾಪನಾ ನೀಡಿದೆನು . ಆ ಪ್ರಕಾರ ಚಾಸಾ-18 ರವರು ಅದೇ ದಿನ ಅಪಘಾತಕ್ಕೆ ಒಳಗಾದ ರಿಕ್ಷಾ ನಂಃ ಕೆಎ-25/ಡಿ-3725 ಅನ್ನು ಚಾಸಾ-2 ಮತ್ತು 3 ರವರಿಗೆ ನೋಟಿಸ ನೀಡಿ ಅವರ ಸಮಕ್ಷಮ ಮಃ 1.00 ರಿಂದ 1.18 ರವರೆಗೆ ನಿಪಿ-10 ರಂತೆ ಜಪ್ತಿ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು . ಸಾಕ್ಷಿಯು ನಿಪಿ-9 ಮತ್ತು 10 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ಅವುಗಳನ್ನು ಕ್ರಮವಾಗಿ ನಿಪಿ-9 (ಸಿ) ಮತ್ತು 10 (ಸಿ) ಎಂದು ಗುರುತಿಸಲಾಯಿತು . ಸಾಕ್ಷಿಯು ಅದೇ ವೇಳೆಗೆ ತೆಗೆದ ನಿಪಿ-11 ರಿಂದ 15 ನೋಡಿ ಗುರುತಿಸಿರುತ್ತಾರೆ .

ನಂತರ ಠಾಣೆ ಬಳಿ ಇರುವ ವಿವೇಕಾನಂದ ಸರ್ಕಲ ಬಳಿ ಸದರಿ ಪಂಚರೊಂದಿಗೆ ಹೋಗಿ ಅಲ್ಲಿ ಚಾಸಾ-18 ರವರು ಹಾಜರುಪಡಿಸಿದ ಲಾರಿ ನಂಃ ಜಿ-06/ಟಿ-9097 ಅನ್ನು ಚಾಸಾ-2 ಮತ್ತು 3 ರವರಿಗೆ ನೋಟಿಸ ನೀಡಿ ಅವರ ಸಮಕ್ಷಮ ಮಃ 1.30 ರಿಂದ 1.47 ರವರೆಗೆ ನಿಪಿ-16 ರಂತೆ ಜಪ್ತಿ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು . ಸಾಕ್ಷಿಯು ನಿಪಿ-16 ರಲ್ಲಿರುವ

ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ಅವುಗಳನ್ನು ಕ್ರಮವಾಗಿ ನಿಪಿ-16 (ಸಿ) ಎಂದು ಗುರುತಿಸಲಾಯಿತು . ಸಾಕ್ಷಿಯು ಅದೇ ವೇಳೆಗೆ ತೆಗೆದ ನಿಪಿ-13 ರಿಂದ 21 ನೋಡಿ ಗುರುತಿಸಿರುತ್ತಾರೆ . ವಶಪಡಿಸಿಕೊಂಡ ವಾಹನಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡೆನು .

ಅಪಘಾತಕ್ಕೆ ಒಳಗಾದ ಮತ್ತು ಕಾರಣವಾದ ವಾಹನಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಸಾರಿಗೆ ಇಲಾಖೆಗೆ ಪತ್ರ ಬರೆದೆನು . ನಂತರ ಚಾಸಾ-9 ರವರ ಹೇಳಿಕೆ ಮತ್ತು ಚಾಸಾ-1 ರವರ ಮರು ಹೇಳಿಕೆ ಪಡೆದೆನು . ಅದೇ ದಿನ ಚಾಸಾ-29 ರವರು ಠಾಣೆಗೆ ಬಂದು ಮೃತ ಪ್ರಣವ ಇವರ ಶವ ಪಂಚನಾಮೆ ಹಾಗೂ ಚಾಸಾ-14 ರವರ ಹೇಳಿಕೆಯೊಂದಿಗೆ ವರದಿ ಮಾಡಿಕೊಂಡರು .

ದಿಃ 21.10.2024 ರಂದು 1 ನೇ ಆರೋಪಿ ಉದ್ದಪ್ಪ ಹೊಣಕೊಿಪ್ಪಿ ನನ್ನ ಮುಂದೆ ಹಾಜರಾಗಿದ್ದು ಅವರನ್ನು ವಿಚಾರಣೆಗೆ ಒಳಪಡಿಸಿ ಚಾಸಾ-1 , 10 ಹಾಗೂ 11 ರವರನ್ನು ಠಾಣೆಗೆ ಕರೆಯಿಸಿದ ಸದರಿಯವರಿಗೆ ಆರೋಪಿಯನ್ನು ತೊರಿಸಿ ಅವರು ಗುರುತಿಸಿದ ಕುರಿತು ಮರು ಹೇಳಿಕೆ ದಾಖಲಿಸಿಕೊಂಡೆನು . ಆರೋಪಿಯನ್ನು ಸಿಬ್ಬಂದಿಯ ಜೊತೆ ಅವನ ರಕ್ತದ ಮಾದರಿ ಪಡೆಯಲು ಧಾರವಾಡ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದೆನು . ನಂತರ ಆರೋಪಿಯನ್ನು ದಸ್ತಗಿರಿ ಮಾಡಿ , ದಸ್ತಗಿರಿ ನಿಯಮ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆನು .

ಅದೇ ದಿನ ಚಾಸಾ-16 ರವರು ಠಾಣೆಗೆ ಹಾಜರಾಗಿದ್ದು ಅವರಿಗೆ ಮೋಟಾರು ವಾಹನ ಕಾಯ್ದೆ ಕಲಂ 133 ರನ್ವಯ ನೋಟಿಸ ನೀಡಿ , ಉತ್ತರ ಹಾಗೂ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದು ಸದರಿಯವರ ವಶಕ್ಕೆ

ಬಿಟ್ಟುಕೊಟ್ಟೆನು . ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ-42 ಎಂದು ಗುರುತಿಸಲಾಯಿತು . ಸಾಕ್ಷಿಯ ಸಹಿಯನ್ನು ನಿಪಿ-42 (ಎ) ಎಂದು ಗುರುತಿಸಲಾಯಿತು . ಅದಕ್ಕೆ ಪ್ರತಿಯಾಗಿ ನೀಡಿದ ಉತ್ತರ ಪಡೆದುಕೊಂಡು ಅದರ ಜೊತೆ ಹಾಜರುಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿದೆನು . ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಪಿ-43 , ಸಾಕ್ಷಿಯ ಸಹಿಯನ್ನು ನಿಪಿ-43 (ಎ) ಎಂದು ಗುರುತಿಸಲಾಯಿತು . ಮುಚ್ಚಳಿಕೆ ಪತ್ರವನ್ನು ನಿಪಿ-44 , ಸಾಕ್ಷಿಯ ಸಹಿಯನ್ನು ನಿಪಿ-44 (ಎ) ಎಂದು ಗುರುತಿಸಲಾಯಿತು .

ದಿಃ 25.10.2024 ರಂದು ಮೃತ ರಮೇಶ ಮತ್ತು 1 ನೇ ಆರೋಪಿಯ ರಕ್ತದ ಮಾದರಿಗಳನ್ನು ಧಾರವಾಡದ ಜಿಲ್ಲಾ ಆಸ್ಪತ್ರೆಯಿಂದ ಸಂಗ್ರಹಿಸಿದೆನು . ನಂತರ ಅವುಗಳನ್ನು ದಿಃ 28.10.2024 ರಂದು ರಾಸಾಯನಿಕ ಪರಿಕ್ಷೆಗಾಗಿ ಆರ್ ಎಫ್ ಎಸ್ ಎಲ್ ಬೆಳಗಾವಿಗೆ ಕಳುಹಿಸಿದೆನು .

ದಿಃ 29.10.2024 ರಂದು ಪ್ರಕರಣದಲ್ಲಿ ಗಾಯಗೊಂಡಿದ್ದ ಪೃಥ್ವಿ ಹಂಚಿನಮನಿ ಇವರು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿರುವುದಾಗಿ ಮಾಹಿತಿ ಬಂದ ಮೇರೆಗೆ ಚಾಸಾ-29 ರವರಿಗೆ ಒಂದು ಜ್ಞಾಪನಾ ಕೊಟ್ಟು ಮೃತರ ಶವ ಪಂಚನಾಮೆ ಮಾಡಿ ನಂತರ ವರದಿ ಮಾಡುವಂತೆ ತಿಳಿಸಿದೆನು . ಆ ಪ್ರಕಾರ ಚಾಸಾ-29 ರವರು ಪಂಚರಾದ ಚಾಸಾ-7 ಮತ್ತು 8 ರವರ ಸಮಕ್ಷಮ ಮೃತ ಪೃಥ್ವಿ ಹಂಚಿನಮನಿ ಇವರ ಶವ ಪಂಚನಾಮೆಯನ್ನು ನಿಪಿ-25 ರಂತೆ ಮಾಡಿ ಪೋಟೋ ತೆಗೆಯಿಸಿ ಅದೇ ದಿನ ಚಾಸಾ-15 ರವರ ಹೇಳಿಕೆ ಪಡೆದು ನನಗೆ ವರದಿ ಮಾಡಿದರು . ಸಾಕ್ಷಿಯು ನಿಪಿ-25 ನ್ನು ನೋಡಿ ಗುರುತಿಸಿರುತ್ತಾರೆ . ಅದೇ ದಿನ ಚಾಸಾ-1 ಮತ್ತು 9 ರಿಂದ 13 ರವರ ಮರು ಹೇಳಿಕೆ ಪಡೆದೆನು . ಅದೇ ದಿನ ಚಾಸಾ-20 ರವರಿಂದ

ನಿಪಿ-29 ಮತ್ತು 30 ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು .

ದಿಃ 04.11.2024 ರಂದು ಚಾಸಾ-17 ರವರು ಪ್ರಮಾಣ ಪತ್ರದೊಂದಿಗೆ ನನ್ನ ಮುಂದೆ ಹಾಜರಾದರು . ಅವರಿಗೆ ಮೋಟಾರು ವಾಹನ ಕಾಯ್ದೆ ಕಲಂ 133 ರನ್ವಯ ನೋಟಿಸ ನೀಡಿ , ಉತ್ತರ ಹಾಗೂ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದು ಸದರಿಯವರ ವಶಕ್ಕೆ ಬಿಟ್ಟುಕೊಟ್ಟೆನು . ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ಕ್ರಮವಾಗಿ ನಿಪಿ-45 ರಿಂದ 47 ಎಂದು ಗುರುತಿಸಲಾಯಿತು . ಸಾಕ್ಷಿಯ ಸಹಿಗಳನ್ನು ನಿಪಿ-45 (ಎ) ರಿಂದ ನಿಪಿ-47 (ಎ) ಎಂದು ಗುರುತಿಸಲಾಯಿತು .

ದಿಃ 08.11.2024 ರಂದು ಸದರಿ ಪ್ರಕರಣದಲ್ಲಿ ತನಿಖೆ ಕಾಲಕ್ಕೆ ಚಿತ್ರೀಕರಿಸಿದ ಮೂರು ಡಿವಿಡಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದೆನು . ಸಾಕ್ಷಿ ಗುರುತಿಸಿದ ಸದರಿ ಡಿವಿಡಿಗಳನ್ನು ನಿಪಿ-49 ರಿಂದ 51 ಎಂದು ಗುರುತಿಸಲಾಯಿತು . ಅದೇ ದಿನ ಮೃತ ಮರೆವ್ವ , ಪ್ರಣವ ಮತ್ತು ಪೃಥ್ವಿ ಇವರ ಮರಣೋತ್ತರ ಪರೀಕ್ಷಾ ವರದಿಗಳು ನಿಪಿ-34 ರಿಂದ 36 ನ್ನು ಚಾಸಾ-24 ರವರಿಂದ ಪಡೆದು ಕಡತಕ್ಕೆ ಅಳವಡಿಸಿದೆನು .

ದಿಃ 06.12.2024 ರಂದು ಚಾಸಾ-19 ರವರಿಂದ ನಿಪಿ-31 ನ್ನು ಪಡೆದು ಕಡತಕ್ಕೆ ಅಳವಡಿಸಿದೆನು . ಅದೇ ದಿನ ಆರ್ ಎಫ್ ಎಸ್ ಎಲ್ ಬೆಳಗಾವಿ ಇವರಿಂದ ನಿಪಿ-37 ರಂತೆ ವರದಿ ಪಡೆದು ಕಡತಕ್ಕೆ ಅಳವಡಿಸಿದೆನು . ಅದೇ ದಿನ ಚಾಸಾ-27 ರವರಿಗೆ ಆರೋಪಿಯ ಕುರಿತು ಬಂದ ಆರ್ ಎಫ್ ಎಸ್ ಎಲ್ ವರದಿಯನ್ನು ಹಾಜರುಪಡಿಸಿ ನಿಪಿ-38 ರಂತೆ ಅಭಿಪ್ರಾಯ ಪಡೆದು ಕಡತಕ್ಕೆ ಅಳವಡಿಸಿದೆನು . ಅದೇ ದಿನ ಮೃತ ರಮೇಶ ಹಂಚಿನಮನಿ ಇವರ ದಿನ ಆರ್

ಎಫ್ ಎಸ್ ಎಲ್ ಬೆಳಗಾವಿ ಇವರಿಂದ ವರದಿ ಪಡೆದು ಚಾಸಾ-23 ರವರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು ಅವರಿಂದ ಅಭಿಪ್ರಾಯ ಪಡೆದು ಕಡತಕ್ಕೆ ಅಳವಡಿಸಿದೆನು . ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-52 ಎಂದು ಗುರುತಿಸಲಾಯಿತು . ಸಾಕ್ಷಿಯು ನಿಪಿ-33 ನ್ನು ನೋಡಿ ಗುರುತಿಸಿರುತ್ತಾರೆ .

ದಿಃ 01.01.2025 ರಂದು ಚಾಸಾ-10 ರವರಿಂದ ಗಾಯದ ಪ್ರಮಾಣ ಪತ್ರ ನಿಪಿ-32 ನ್ನು ಪಡೆದು ಕಡತಕ್ಕೆ ಅಳವಡಿಸಿದೆನು . ಸಾಕ್ಷಿಯು ನಿಪಿ-32 ನ್ನು ನೋಡಿ ಗುರುತಿಸಿರುತ್ತಾರೆ .

ತನಿಖೆ ಮುಕ್ತಾಯಗೊಂಡಿದ್ದರಿಂದ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದೆನು . ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ಅಪಘಾತ ಸ್ಥಳದ ಚೆಕ್ಕು ಬಂದಿಯನ್ನು ದಾಖಲೆ ನೋಡಿ ಹೇಳಬಲ್ಲೆ . ಅಪಘಾತ ಸ್ಥಳವು ನಮ್ಮ ಠಾಣೆಯಿಂದ ಅಂದಾಜು 4 ಕಿ.ಮೀ ಅಂತರದಲ್ಲಿದೆ . ನಾನು ಹೇಳಿದಂತೆ ಅಪಘಾತ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಸಾಕ್ಷಿದಾರರು ಎಂದರೆ ಸರಿಯಲ್ಲ . ಅಪಘಾತ ಸ್ಥಳದಲ್ಲಿ ಸಾಮಾನ್ಯವಾಗಿ ಜನರು ಇರುತ್ತಾರೆ ಆದರೆ ಅಪಘಾತದ ನಿರ್ದಿಷ್ಟ

ಸಮಯದಲ್ಲಿ ಜನ ಯಾರೂರು ಇರುವುದಿಲ್ಲ ಎಂದು ಹೇಳುತ್ತಾರೆ . ಚಾಸಾ-2 ಮತ್ತು 3 ರವರು ಕೆಲಗೇರಿ ವ್ಯಾಪ್ತಿಯವರು . ನಾನು ಅಪಘಾತ ಸ್ಥಳಕ್ಕೆ ಹೋಗಿಲ್ಲ , ಸ್ಥಳ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ . ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಗಾಯಾಳುಗಳಿಗೆ ಪರಿಹಾರ ಸಿಗಲೀ ಮತ್ತು ಠಾಣಾ ಅಂಕಿ ಅಂಶಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ವರದಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧಿ ಇಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ